ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 336 ಗ್ರಾಪಂಕಾ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 08.07.2014

**ಇವರಿಂದ:**

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,**
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

**ಇವರಿಗೆ:**

**ಎಲ್ಲಾ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು,**
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್,

ಮಾನ್ಯರೆ,

**ವಿಷಯ:** ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಿಗೆ "ರಾಷ್ಟ್ರೀಯ ಆಪ್ಟಿಕಲ್ ಫೈಬರ್" ಅಂತರ್ ಜಾಲವನ್ನು ಅಳವಡಿಸುವ ಬಗ್ಗೆ.

**ಉಲ್ಲೇಖ:** ಮೆ॥ ಭಾರತ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ಲಿ. ಬೆಂಗಳೂರು ಪತ್ರ ದಿನಾಂಕ: 08.07.2014.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ ಸರ್ಕಾರ ಸ್ವಾಮ್ಯದ ಮೆ॥ ಭಾರತ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ಲಿ. ಬೆಂಗಳೂರು ರವರು ಸರ್ಕಾರಕ್ಕೆ ದಿನಾಂಕ: 08.07.2014ರಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳನ್ನು "ರಾಷ್ಟ್ರೀಯ ಆಪ್ಟಿಕಲ್ ಫೈಬರ್" ಅಂತರ್ ಜಾಲಕ್ಕೆ ಒಳಪಡಿಸಲು ಅವಶ್ಯವಾಗಿರುವ ONTS, Solar Power Panels ಗಳನ್ನು ಮುಂತಾದ ಸಾಧನಗಳನ್ನು ಅಳವಡಿಸಲು M/s UTL. ಸಂಸ್ಥೆಗೆ ಕಾರ್ಯ ಜವಾಬ್ದಾರಿಯನ್ನು ವಹಿಸಿರುವುದಾಗಿ ಪ್ರಸ್ತಾವನೆಯಲ್ಲಿ ತಿಳಿಸಿರುತ್ತಾರೆ. M/s UTL. ಸಂಸ್ಥೆಯ ಸಿಬ್ಬಂದಿ ವರ್ಗದವರು ಗ್ರಾಮ ಪಂಚಾಯತಿಗಳಿಗೆ ಈ ಸಾಧನಗಳನ್ನು ಅಳವಡಿಸಲು ಆಗಮಿಸಿದಾಗ ಅಗತ್ಯ ಸಹಕಾರವನ್ನು ನೀಡಲು ಹಾಗೂ ಸಾಧನಗಳನ್ನು ಅಳವಡಿಸಿರುವ ಬಗ್ಗೆ ಸಿಬ್ಬಂದಿ ವರ್ಗದವರಿಗೆ ದೃಢೀಕರಣ ಪತ್ರವನ್ನು ನೀಡುವಂತೆ ಕೋರಿರುತ್ತಾರೆ.

**ಮೇಲ್ಕಂಡ M/s UTL. ಸಂಸ್ಥೆಯ ಸಿಬ್ಬಂದಿಯವರು ಗ್ರಾಮ ಪಂಚಾಯತಿಗಳಿಗೆ "ರಾಷ್ಟ್ರೀಯ ಆಪ್ಟಿಕಲ್ ಫೈಬರ್"ನ್ನು ಅಳವಡಿಸಲು ಆಗಮಿಸಿದಾಗ ಅಗತ್ಯ ಸಹಕಾರ ನೀಡಲು ಹಾಗೂ ಸಾಧನ ಅಳವಡಿಸಿರುವ ಬಗ್ಗೆ ಪತ್ರವನ್ನು ಮೆ॥ ಭಾರತ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ಲಿ. ಗೆ ನೀಡುವಂತೆ** ಎಲ್ಲಾ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ/ ಕಾರ್ಯದರ್ಶಿಗಳಿಗೆ ನಿರ್ದೇಶನ ನೀಡುವಂತೆ ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

8/7/14

(ಕೆ.ಯಾಲಕ್ಕಿಗೌಡ)
ನಿರ್ದೇಶಕರು (ಪಂ.ರಾಜ್) ಹಾಗೂ
ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿ ಮಾಹಿತಿಗಾಗಿ:

1. ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕಾಧಿಕಾರಿಗಳ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಮೆ॥ ಭಾರತ್ ಬ್ರಾಡ್‌ಬ್ಯಾಂಡ್ ನೆಟ್‌ವರ್ಕ್ ಲಿ. ಬೆಂಗಳೂರು ರವರ ಮಾಹಿತಿಗಾಗಿ.

ಪು(ವಿ)